# ಭೋವಿ ಸಮಾಜದ ಬಡಕುಟುಂಬಗಳಿಗೆ ದವಸ-ಧಾನ್ಯ ವಿರತಣೆ

**ಚಿತ್ರದುರ್ಗ ಏ. 10** - ನಗರದ ಶ್ರೀಮುರುಘರಾಜೇಂದ್ರ ಮಠದಲ್ಲಿಂದು ಡಾ. ಶಿವಮೂರ್ತಿ ಮುರುಘಾ ಶರಣರು ಭೋವಿ ಸಮುದಾಯದ ಬಡ ಕುಟುಂಬಗಳಿಗೆ ದವಸ-ಧಾನ್ಯಗಳನ್ನು ವಿತರಿಸಿದರು. ನಂತರ ಮಾತನಾಡಿದ ಶ್ರೀಗಳು, ಹಸಿವು ತುಂಬ ಕೆಟ್ಟದ್ದು. ಈ ಸಂದರ್ಭದಲ್ಲಿ ಯಾರೂ ಹಸಿವಿನಿಂದ ಬಳಲಬಾರದು. ಅಂತವರಿಗೆ ಶ್ರೀಮಠವು ಸ್ಪಂದಿಸುತ್ತದೆ. ಅಸಹಾಯಕರ ಜೊತೆ ನಾವಿರುತ್ತೇವೆ. ಲಾಕ್‌ಡೌನ್ ಮುಗಿಯುವವರೆಗು ವಿವಿಧ ಸಮುದಾಯಗಳಲ್ಲಿ ಸಂಕಷ್ಟಕ್ಕೀಡಾಗಿ ಜೀವನ ನಡೆಸುವುದು ದುಸ್ತರವಾಗಿದೆ ಎನ್ನುವವರನ್ನು ಗುರುತಿಸಿ ದವಸ-ಧಾನ್ಯಗಳನ್ನು ವಿತರಿಸಲಾಗುವುದು ಎಂದು ಹೇಳಿದರು.

ಭೋವಿಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು, ಶ್ರೀ ತಿಪ್ಪೇರುದ್ರ ಸ್ವಾಮಿಗಳು, ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಆರ್.ಲಿಂಗರಾಜು, ರವಿ ಮೊದಲಾದವರಿದ್ದರು.






ಶ್ರೀ ಜಗದ್ಗುರು
ಸಾನ್ನಿಧ್ಯ: ಡಾ.
ವೈರಸ್


ಶ್ರೀ ಜಗದ್ಗುರು
ಸಾನ್ನಿಧ್ಯ: ಡಾ.
ಶರಣರು
ಕೊರೋನ
ಹಾಗೂ
ದಿನಾಂಕ:





